
## ಕಥೋಪದೇಶ

# ಮಗನ ಕವನ



ಫ್ರಾನ್ಸಿನ ಪ್ರಸಿದ್ಧ ಗಾಯಕಿ ಮೆಲಿಬ್ರಾನ್ ತನ್ನ ಕೋಣೆಗೆ ಹೋಗುವ ಮುನ್ನ ನೌಕರನಿಗೆ ತಾನು ಇಂದು ಯಾರನ್ನೂ ಭೇಟಿಯಾಗುವುದಿಲ್ಲವೆಂದು ಹೇಳಿದಳು.

ನೌಕರ, "ತಾಯಿ, ಒಬ್ಬ ಬಡ ಹುಡುಗ ಮಾತ್ರ ನಿಮ್ಮನ್ನು ನೋಡಲು ಕಾದಿದ್ದಾನೆ" ಎಂದ. ಮೆಲಿಬ್ರಾನ್ "ಅವನನ್ನು ಮಾತ್ರ ಒಳಕ್ಕೆ ಬಿಡು" ಎಂದಳು. ನೌಕರ ಬಾಲಕನನ್ನು ಕರೆತಂದ. ಮೆಲಿಬ್ರಾನ್ ಪ್ರೀತಿಯಿಂದ, "ಮಗೂ, ನಿನ್ನ ಹೆಸರೇನು?" ಎಂದು ಕೇಳಿದಳು. ಬಾಲಕ ಮೃದುವಾಗಿ, "ಪಿಯರೆ" ಎಂದ. ಮೆಲಿಬ್ರಾನ್, "ಬಹಳ ಮುದ್ದಾದ ಹೆಸರು. ಈಗ ಏಕೆ ಬಂದೆ ಹೇಳು?" ಎಂದಳು. ಹುಡುಗ ವಿನಯದಿಂದ, "ನನ್ನ ತಾಯಿ ರೋಗಗ್ರಸ್ತಳಾಗಿದ್ದಾಳೆ. ಔಷಧಿ ಪಥ್ಯಗಳಿಗೆ ಕಾಸಿಲ್ಲ. ನಾನೊಂದು ಸಣ್ಣ ಕವಿತೆ ಬರೆದಿದ್ದೇನೆ. ಅದನ್ನು ನೀವು ಸಂಗೀತಸಭೆಯಲ್ಲಿ ಹಾಡಬೇಕು. ಆಮೇಲೆ ನಿಮಗೆ ಮನಸ್ಸಿಗೆ ಬಂದಷ್ಟು ನನಗೆ ಏನಾದರೂ ಸಹಾಯ ಮಾಡಿ" ಎಂದ. ಮೆಲಿಬ್ರಾನ್ ಕವಿತೆ ಓದಿದಳು. ಅವಳಿಗೆ ಅದು ಹಿಡಿಸಿತು.

ಮಾರನೆಯ ದಿನ ಒಂದು ಸಂಗೀತ ಕಛೇರಿಯಲ್ಲಿ ಅವಳು ಅದನ್ನು ಕರುಣಾ ರಸಪೂರ್ಣವಾಗಿ ಹಾಡಿದಳು. ಶ್ರೋತೃಗಳ ಕಣ್ಣಿನಿಂದ ಧಾರಾಕಾರವಾಗಿ ಕಂಬನಿ ಹರಿಯಿತು.

ಮೆಲಿಬ್ರಾನ್ ಅಂದಿನ ಸಂಗೀತ ಕಛೇರಿಯಿಂದ ಬಂದ ವರಮಾನವನ್ನೆಲ್ಲ ತೆಗೆದುಕೊಂಡು, ಆ ಹುಡುಗನ ಮನೆಗೆ ಹೋದಳು.

ಹುಡುಗನ ತಾಯಿ ರೋಗಶಯ್ಯೆಯಲ್ಲಿ ಮಲಗಿದ್ದಳು. ಮೆಲಿಬ್ರಾನ್ ಹಣವನ್ನು ಆಕೆಯ ಕಾಲುಗಳ ಬಳಿ ಇಟ್ಟು, "ಅಮ್ಮ, ಸತ್ಯ ಮತ್ತು ನ್ಯಾಯಮಾರ್ಗದಲ್ಲಿ ನಡೆಯುತ್ತಿರುವ ನಿನ್ನ ಮಗನ ಹಣವೇ ಇದು. ಇದನ್ನು ಔಷಧಿ ಮತ್ತು ಪಥ್ಯಗಳಿಗೆ ಉಪಯೋಗಿಸಿಕೊಳ್ಳಿ" ಎಂದಳು.

ಸಂಗ್ರಹ: ಟಿ.ವಿ.ವೆಂಕಟರಮಣಯ್ಯ

# ಜೀವನಚರಿತ್ರೆಯನ್ನು ಬರೆಯುವುದು ಹೇಗೆ?



ಸಂಗ್ರಹ: ಎಲ್. ಎಸ್. ಹೆಗಡೆ ಪುಟ್ಟನಮನೆ

ಒಬ್ಬರು ಮಹಾತ್ಮರು ಇದ್ದರು. ಅವರಿಗೆ ವಿದ್ವಾಂಸರೊಬ್ಬರು ಭಕ್ತರಾಗಿದ್ದರು. ಒಬ್ಬ ಮಿತ್ರ ವಿದ್ವಾಂಸನನ್ನು ಕೇಳಿದ, "ಸ್ವಾಮಿ, ಮಹಾತ್ಮರು ದೊಡ್ಡ ಯೋಗಿಗಳು; ಸತ್ಯಸಾಕ್ಷಾತ್ಕಾರ ಮಾಡಿಕೊಂಡ ಮಹಾಪುರುಷರು. ಅವರ ಜೀವನದಲ್ಲಿ ಅದ್ಭುತ ಘಟನೆಗಳು ಆಗಿ ಹೋಗಿವೆ. ಅದನ್ನು ನೀವು ತಿಳಿದುಕೊಂಡಿದ್ದೀರಿ. ಹಾಗಿರುವಾಗ ನೀವು ಅವರ ಜೀವನಚರಿತ್ರೆಯನ್ನು ಏಕೆ ಬರೆಯುತ್ತಿಲ್ಲ?" ಅದಕ್ಕೆ ವಿದ್ವಾಂಸರು ಗಂಭೀರಭಾವದಿಂದ ಹೇಳಿದರು, "ಮಹಾತ್ಮರ ಜೀವನಚರಿತ್ರೆಯನ್ನು ಬರೆಯುವ ಪ್ರಯತ್ನದಲ್ಲಿಯೇ ನಾನು ತೊಡಗಿದ್ದೇನೆ. ಸ್ವಲ್ಪ ಆರಂಭಿಸಿಯೂ ಬಿಟ್ಟಿದ್ದೇನೆ." ಆ ಮಿತ್ರನಿಗೆ ಕುತೂಹಲ ಉಂಟಾಯಿತು. ಅವನು ಕೇಳಿದ, "ಸ್ವಾಮಿ, ಜೀವನಚರಿತ್ರೆ ಯಾವತ್ತು ಪ್ರಕಟಗೊಳ್ಳುವುದು?" ಪಂಡಿತರು ಮುಗುಳುನಗುತ್ತ ಹೇಳಿದರು, " ಬಹುಶಃ ನಾನು ಮಹಾತ್ಮರ ಜೀವನ ಚರಿತ್ರೆಯನ್ನು ಕಾಗದದ ಮೇಲೆ, ಲೇಖನಿಯಿಂದ ಬರೆಯುತ್ತಿದ್ದೇನೆ ಎಂದು ಭಾವಿಸಿದಿರೇನು? ಹಾಗೇನಿಲ್ಲ, ನೀವು ತಪ್ಪು ತಿಳಿದುಕೊಂಡಿದ್ದೀರಿ. ನನ್ನ ಉದ್ದೇಶ್ಯವೆಂದರೆ ಮಹಾತ್ಮರ ಜೀವನಚರಿತ್ರೆಯನ್ನು ನಮ್ಮ ಜೀವನದಲ್ಲಿ ಆಚರಣೆಗೆ ತಂದು ಬರೆಯಬೇಕು. ನನ್ನ ಜೀವನದಲ್ಲಿ ಮಹಾತ್ಮರ ಉಪದೇಶವನ್ನು ಮತ್ತು ನಡವಳಿಕೆಯನ್ನು ಸಾಧ್ಯವಾದ ಮಟ್ಟಿಗೆ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಹೀಗೆ ಅವರ ಚರಿತ್ರೆಯನ್ನು ನನ್ನ ಬಾಳಿನಲ್ಲಿ ಕೃತಿಯಲ್ಲಿ ಇಳಿಸಲು ಪ್ರಯಾಸಪಡುತ್ತಿದ್ದೇನೆ." ★